**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ. 183/2015**
**ಪ್ರ.ಸಾ-2**

**ಸಾಕ್ಷಿಗೆ ದಿನಾಂಕಃ 31.10.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಶ್ರೀ ಸಿ.ಬಿ.,ವಕೀಲರಿಂದ ವಾದಿಯರ ಪರ ವಕೀಲರಿಂದ**

1. ಒಂದನೇ ಪ್ರತಿವಾದಿ ಗಂಗಮ್ಮನ ಗಂಡ ಬಸಪ್ಪನನ್ನು ನಾನು ನೋಡಿದ್ದೇನೆ. ಸದರಿಯವರು ಈಗ ಇಲ್ಲ. ಸದರಿಯವರು ತೀರಿಕೊಂಡು ಸುಮಾರು 10 ವರ್ಷಗಳು ಆಗಿವೆ. 01 ನೇ ಪ್ರತಿವಾದಿಯ ಗಂಡನ ಅಣ್ಣ ಗೋವಿಂದಪ್ಪ ನನಗೆ ಗೊತ್ತಿಲ್ಲ. ಸದರಿ ಗೋವಿಂದಪ್ಪ ಈಗ ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಗೋವಿಂದಪ್ಪ ಮತ್ತು 01 ನೇ ಪ್ರತಿವಾದಿ ಗಂಡನಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಇದ್ದವು ಎಂದರೆ ಸರಿ. ದಾವಾ ಜಮೀನು ಕೂಡ ಸದರಿಯವರಿಗೆ ಹಿರಿಯರಿಂದ ಬಂದಂತಹ ಆಸ್ತಿ ಎಂದರೆ ಸರಿ.

2. ದಾವಾ ಜಮೀನಿನ ಅಕ್ಕಪಕ್ಕದಲ್ಲಿ ನನಗೆ ಸೇರಿದ ಜಮೀನು ಇಲ್ಲ. ನನ್ನ ಸ್ವಂತ ಊರು ಹೊಸಹಳ್ಳೀ ಗ್ರಾಮ ಎಂದರೆ ಸರಿ. ಗೊರವಿನಕಲ್ಲು ಗ್ರಾಮದಿಂದ ನನ್ನ ಊರಿಗೆ ಸುಮಾರು 4 ಕಿ.ಮೀ. ಅಂತರವಿದೆ ಎಂದರೆ ಸರಿ. ದಾವಾ ಸರ್ವೆ ನಂ. ಒಟ್ಟು 25 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನು ಗೊರವಿನಕಲ್ಲು ಗ್ರಾಮಕ್ಕೆ ಲಗತ್ತಾಗಿ ಪೂರ್ವ ದಿಕ್ಕಿಗೆ ಇದೆ ಎಂದರೆ ಸರಿ.

3. 01 ನೇ ಪ್ರತಿವಾದಿ ಗಂಡ ಮತ್ತು ಗೋವಿಂದಪ್ಪನಿಗೆ ಗೊರವಿನಕಲ್ಲು ಗ್ರಾಮದ ಸರ್ವೆ ನಂ. 16 ಮತ್ತು ಬೈರಾಪುರ ಗ್ರಾಮದ ಸರ್ವೆ ನಂ. 5 ಎಂಬ ಎರಡು ಜಮೀನುಗಳು ಕೂಡ ಇದ್ದವು ಎಂದರೆ ಸರಿ. ಸದರಿಯವರು 1965 ರ

ಪ್ರ.ಸಾ-2

ಪೂರ್ವದಲ್ಲಿಯೇ ತಮ್ಮ ಕುಟುಂಬದ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಂತೆ ದಾವಾ ಜಮೀನು ಗೊವಿಂದಪ್ಪನ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ.

4. ದಾವಾ ಜಮೀನನ್ನು ವಾದಿಯರ ತಂದೆ ದಿ: 28.06.1967 ರಲ್ಲಿ ಗೊವಿಂದಪ್ಪನವರಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಂತೆ ಜಮೀನಿನ ದಾಖಲಾತಿಗಳು ಕೂಡ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳಂತೆ ಜಮೀನನ್ನು ಮಾರಾಟ ಮಾಡಿದ್ದರು ಕೂಡ ಗೊವಿಂದಪ್ಪನು ಪುನಃ 1984-1985 ನೇ ಸಾಲಿನಲ್ಲಿ ಕಂದಾಯ ಇಲಾಖೆಗೆ ಸುಳ್ಳು ಮಾಹಿತಿಯನ್ನು ನೀಡಿ ದಾವಾ ಜಮೀನನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಗೊವಿಂದಪ್ಪನು ಸರ್ವೆ ನಂ. 16 ನ್ನು ಅಂಜಿ ನಾಗರಾಜ್ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ. 05 ನ್ನು ಓಂಕಾರಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

5. ಪ್ರತಿವಾದಿಯರು ನನಗೆ ಸಂಬಂಧಿಕರು ಆಗಬೇಕು ಎಂದರೆ ಸರಿ. ದಾವಾ ಜಮೀನು ಮಾರಾಟದ ವಿಷಯ ಗೊತ್ತಿದ್ದರು ಸಹ ವಾದಿಯರಿಗೆ ತೊಂದರೆ ಮಾಡುವ ಉದ್ದೇಶದಿಂದ ಪ್ರತಿವಾದಿಯವರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೊವಿಂದಪ್ಪನ ವಾರಸುದಾರರು ಈಗಲೂ ಕೂಡ ದಾವಣಗೆರೆಯಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗೊವಿಂದಪ್ಪ ಮಾನಸಿಕ ರೋಗಿಯಾಗಿದ್ದ ಮತ್ತು ವಿವಾಹ ವಾಗಿರಲಿಲ್ಲ ಎಂದು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕತ್ವ ಮತ್ತು ಸ್ವಾಧೀನದ ಬಗ್ಗೆ ಯಾವುದೇ ಮಾಹಿತಿ ಇಲ್ಲದ್ದಿದ್ದರೂ ಕೂಡು ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಪ್ರತಿವಾದಿಯರು ಅಥವವಾ 01 ನೇ ಪ್ರತಿವಾದಿಯ ಗಂಡ 1965 ರಿಂದ ಇವರೆಗೆ ದಾವಾ ಜಮೀನನ್ನು ಯಾವುತ್ತೂ ಕೂಡು ಸ್ವಾಧಿನಾನುಬೋಗ ಮಾಡಿಲ್ಲ ಎಂದರೆ ಸರಿಯಲ್ಲ. 1967 ರಿಂದ ಇವರೆಗೆ ವಾದಿಯರೆ ದಾವಾ ಜಮೀನಿನ ಮಾಲೀಕರು ಮತ್ತು ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

**ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**